ದೀಪಾವಳಿ ಎಂದರೆ ದೀಪಗಳ ಸಮೂಹ ಅಥವಾ ಗುಂಪು ಎಂದರ್ಥ.

ನರಕಾಸುರನನ್ನು ಕೊಂದು, ಜಗತ್ತಿಗೆ ಬೆಳಕನ್ನು ಕೊಟ್ಟ ಶ್ರೀಹರಿಗೆ ದೀಪಗಳನ್ನು ಬೆಳಗುವುದರ ಮೂಲಕ ಕೃತಜ್ಞ ತೆಯನ್ನು , ನಮನಗಳನ್ನು ಅರ್ಪಿಸುವುದು ಹಬ್ಬದ ತಾತ್ಪರ್ಯ.

ಪ್ರಣತಿಗಳಲ್ಲಿ ಬತ್ತಿಯನ್ನಿಟ್ಟು, ಎಣ್ಣೆಯನ್ನು ಹಾಕಿ ಮನೆಯ ಅಂಗಳದಲ್ಲಿ ದೀಪಗಳ ಸಾಲನ್ನು ಹಚ್ಚಿ, ದೇವರಮನೆ ಒಳಗಡೆ ಬೆಳ್ಳಿಯ ಅಥವಾ ಬಂಗಾರದ ನೀಲಾಂಜನಗಳಲ್ಲಿ ದೀಪಗಳನ್ನು ಹಚ್ಚಿ ನಮ್ಮ ನಮನಗಳನ್ನು ಅರ್ಪಿಸುವುದು ಸಂಪ್ರದಾಯ.

ಹೊರಗೆ ದೀಪಗಳನ್ನು ಹಚ್ಚಿಯೂ ಮನೆಯ ವೊಳಗೆ ಕತ್ತಲಿದ್ದರೆ ಶೋಭೆಯೇ ಹೇಳಿ?
ನಮ್ಮ ದೇಹವೇ ದೇವರರಿರುವ ನಿಜವಾದ ಮನೆ, ಸ್ಥೂಲದೇಹವೇ ಹೊರಗಿನ ಪ್ರಾಕಾರವು ಅದರಲ್ಲಿ ಸಪ್ತಧಾತುಗಳಿಂದಾದ ಗೋಡೆಗಳು, ಆಗೋಡೆಗಳಲ್ಲಿ ಎಡಬದಿಯಲ್ಲಿ ೩೬೦೦೦ ನಾಡಿಗಳ, ಬಲಬದಿಯಲ್ಲಿ ೩೬೦೦೦ ನಾಡಿಗಳ ಸೋಪಾನಗಳು, ಮೂರುವರೆ ಕೋಟಿ ರೋಮ ಕೂಪಗಳೇ ಸುಂದರ ತೀರ್ಥಗಳು, ಇಂದ್ರಿಯಗಳೇ ಹನ್ನೊಂದು ದ್ವಾರಗಳು. ಕಣ ಕಣದಲ್ಲೂ ಪ್ರತಿಯೊಂದು ಕಡೆ ನಿಂತ ದೇವರ ಹಾಗೂ ದೇವತೆಗಳ ರೂಪಗಳೇ ಪ್ರಕಾಶದಿಂದ ಹೊಳೆಯುವ ಕೆತ್ತಿದ ನವರತ್ನದ ಹರಳುಗಳು.

ಒಮ್ಮೆ ಶ್ರೀರಂಗದ ಪ್ರಾಕಾರಗಳನ್ನು ಸ್ಮರಣೆಗೆ ತಂದುಕೊಂಡರೆ: ಅದೇ ರೀತಿ ನಮ್ಮ ಶರೀರದಲ್ಲೂ, ಇಂದ್ರಿಯಗಳ ಮೂಲಕ ದೇವರು ದೇವತೆಗಳು ಮಾಡಿಸುವ ಲೆಕ್ಕವಿಲ್ಲದಷ್ಟು ವ್ಯಾಪಾರಗಳೇ ಪ್ರಣತಿಯ ಸಾಲು, ಅಲ್ಲಿ ಪ್ರಕಟವಾಗುವ ದೇವರ  ದೇವತೆಗಳ ರೂಪಗಳೇ ಎಂದೆಂದೂ ಕಪ್ಪುಗಟ್ಟದ ಬತ್ತಿಗಳು.  ಈ ಜೀವನನನ್ನು ಉಧ್ಧಾರ ಮಾಡಲೇಬೇಕೆಂಬ ಪ್ರಾಣಾದಿ ದೇವತೆಗಳ ದೃಢ ಸಂಕಲ್ಪವೇ ಎಂದೆಂದೂ ಕದಿಮೆ ಆಗದ ಅದ್ಭುತವಾದ ಎಣ್ಣೆ. ಅಲ್ಲಲ್ಲಿ ಪ್ರಕಟವಾಗುವ ಅನಂತ ಅದ್ಭುತ ವಿಚಿತ್ರ ಕರುಣೆ ಎಂಬ ಕಾಂತಿಯಿಂದ ಒಪ್ಪುವ ಭಗವದ್ರೂಪಗಳೇ ದೀಪದ ಜ್ವಾಲೆಗಳು. ಅವನ ಅದ್ಭುತ ಪ್ರಕಾಶದಿಂದ ಇಡೀ ಪ್ರಾಕಾರವೇ ಹೊಳೆಯುತ್ತಿದೆ.

ಈ ಪ್ರಾಕಾರದ ನಂತರ ಹೀಗೆಯೇ ಇರುವ ಇನ್ನಷ್ಟು ಹೊಳೆಯುವ ದೀಪಗಳ ಸಾಲುಗಳಿಂದ ಕೂಡಿದ ಅದರೊಳಗಿನ ಪ್ರಕಾರ ಅನಿರುದ್ಧ ದೇಹ.

ಈ ಪ್ರಾಕಾರದ ನಂತರ ಲಿಂಗ ದೇಹದ ಪರಮಾದ್ಭುತ ಜಗಜಗಿಸುವ ದೀಪಗಳ ಸಾಲಿನ ಪ್ರಾಕಾರ.

ಅದರೊಳಗಿರುವುದೇ ಅತ್ಯದ್ಭುತವಾದ ಸ್ವರೂಪ ದೇಹವೆಂಬ ಬಿಂಬರೂಪಿ ಶ್ರೀಹರಿಯ ಮಂದಿರ. ಇಲ್ಲಿಯೂ ಜಗಜಗಿಸುವ ಸಕಲೇಂದ್ರಿಯಗಳಿಂದ ಸದಾ ಪ್ರಕಟವಾಗುವ ವಿಚಿತ್ರ ಭಗವದ್ರೂಪಗಳ ಕಾಂತಿಯಿಂದ ಪ್ರಕಾಶ ಸರ್ವತ್ರ

ತುಂಬಿದೆ ಇದರೊಳಗಿದ್ದಾನೆ ನಮ್ಮ ಸ್ವಾಮಿ. ಅವನೇ ಬೆಳಗಿಸಿದ ದೀಪಗಳಿಂದ ನಾಲ್ಕೂ ದೇಹ ಬೆಳಗುತ್ತಿವೆ, ಇಲ್ಲಿ ನಿರಂತರ ದೀಪಾವಳಿ.

ಈಚಿಂತನೆ ಮಾಡಿ ಅವನಿಗೆ ಕೈಜೋಡಿಸಿ ನಮ್ಮಿಂದ ಅವನೇ ಮಾಡಿಸಿದ ಕರ್ಮಗಳ ಸಲೇ ಪ್ರಣತಿಗಳ ಸಾಲು, ನಿಶ್ಚಯ ಜ್ಞಾನವೇ ಬತ್ತಿ, ಭಕ್ತಿ ಎಣ್ಣೆ ಆಯಾ ಕರ್ಮಗಳಿಂದ ಪ್ರಕಟವಾಗುವ ಅವನ ರೂಪಗಳನ್ನು ಬಿಂಬನಿಗೆ ಐಕ್ಯ ಚಿಂತಿಸುವುದೇ ದೀಪದ ಜ್ವಾಲೆ.  ಇಂಥಾ ದೀಪಗಳನ್ನು (ಅಲ್ಲಿರುವ ಭಗವದ್ರೂಪಗಳನ್ನು) ನಮ್ಮ ನಾಲ್ಕೂ ದೇಹದಲ್ಲಿರುವ ಅನಂತ ಭಗವದ್ರೂಪಗಳ ಮುಂದೆ ಸಮರ್ಪಿಸಿ (ಭಗವದ್ರೂಪಗಳನ್ನು ಬಿಂಬನಿಗೆ ಐಕ್ಯ ತಿಳಿದು) ಹಬ್ಬವನ್ನು ಆಚರಿಸಬೇಕು.

ನಮ್ಮ ಬಿಂಬನಲ್ಲಿ ಬ್ರಹ್ಮಾಂಡದಲ್ಲಿರುವ ಸಕಲ ಪೂಜ್ಯ ಅಧೀಷ್ಠಾನಗಳಲ್ಲಿರುವ ಅನಂತ ಭಗವದ್ರೂಪಗಳೂ ಇವೆ ಎಂದು ತಿಳಿದು ನಮಸ್ಕಾರವೇ ದೀಪವೆಂದು ಅರ್ಪಿಸಿ (ನಮಸ್ಕಾರದಲ್ಲಿರುವ ಭಗವದ್ರೂಪಗಳನ್ನು ಬಿಂಬನಿಗೆ ಐಕ್ಯ ತಿಳಿದು) ಬ್ರಹ್ಮಾಂಡದ ಹದಿನಾಲ್ಕು ಲೋಕದಲ್ಲಿರುವ ಸ್ವಾಮಿಯ ಅನಂತ ಭಗವದ್ರೂಪಗಳ (ಸಕಲ ಪೂಜ್ಯ ಅಧೀಷ್ಠಾನಗಳಲ್ಲಿರುವ) ಮುಂದೆ ದೀಪಗಳ ಸಾಲನ್ನು ಹಚ್ಚಿ ದೀಪಾವಳಿಯನ್ನು ಆಚರಿಸೋಣ.

ನಮ್ಮೊಳಗಿರುವ ನಾನೇ ನಾನೇ ಎಂಬ ಸ್ವಾತಂತ್ರ್ಯ ಆರೋಪವೆಂಬ ನರಕಾಸುರ ನಮ್ಮ ನಾನಾ ಸತ್ಸಾಧನೆಗಳೆಂಬ ಕನ್ಯೆಯರನ್ನು ಸೆರೆ ಹಿಡಿದಿದ್ದಾನೆ. ಅವನನ್ನು ಸಂಹರಿಸಿ ನಮ್ಮ ಸಾಧನಾ ಕನ್ಯೆಯರನ್ನು ಕೈಹಿಡಿದು, ನಮ್ಮೊಳಗೆ ಜ್ಞಾನದ ಬೆಳಕನ್ನು ಪಾಲಿಸೆಂದು ಪ್ರಾರ್ಥಿಸೋಣ.

ಶ್ರೀದಾಸರ ಮೂಲಕ ಸ್ವಾಮಿ ತಿಳಿಸಿದ ಅನುಸಂಧಾನದ ದೀಪಾವಳಿಯನ್ನು ಆಚರಿಸುವ ಭಗವದ್ಭಕ್ತರಾದ ತಮ್ಮೆಲ್ಲರಿಗೂ ಹೃತ್ಪೂರ್ವಕ ಶುಭಾಶಯಗಳು.

ನಮಸ್ಕಾರಗಳೊಂದಿಗೆ,

ದಾಸರ ದಾಸ
ಕರ್ನೂಲು ಶ್ರೀನಿವಾಸಾಚಾರ್ಯ